**ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐಎಫ್ಎ) ವತಿಯಿಂದ ಅರ್ಜಿಗಳ ಆಹ್ವಾನ**

**ಕಲಾ ವೇದಿಕೆಗಳು (Arts Platforms)**

**ಆರ್ಟ್ಸ್ ಪ್ರಾಕ್ಟಿಸ್ (Arts Practice) ಕಾರ್ಯಕ್ರಮದ ಅಡಿಯಲ್ಲಿ**

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಆಗಸ್ಟ್ 31, 2026**

**ಆರ್ಟ್ಸ್ ಪ್ರಾಕ್ಟಿಸ್ (Arts Practice)** ಕಾರ್ಯಕ್ರಮವು ಕಲಾವಿದರು ತಮ್ಮ ಈಗಿನ ಕಲಾ ಅಭ್ಯಾಸಗಳನ್ನು ಹೊಸ ದಿಕ್ಕುಗಳಲ್ಲಿ ವಿಸ್ತರಿಸುವ ಯೋಜನೆಗಳನ್ನು ಅನುಷ್ಠಾನಗೊಳಿಸುವುದನ್ನು ಉದ್ದೇಶಿಸುತ್ತದೆ. ಇಂತಹ ಯೋಜನೆಗಳು ಈಗಾಗಲೇ ಅಂಗೀಕರಿಸಲ್ಪಟ್ಟಿರುವ ಸಂಪ್ರದಾಯಗಳನ್ನು ಪ್ರಶ್ನಿಸಬಹುದು, ವಿಷಯ, ರೂಪ ಮತ್ತು ಮಾಧ್ಯಮಗಳಲ್ಲಿ ಹೊಸ ಗಡಿಗಳನ್ನು ಅನ್ವೇಷಿಸಬಹುದು, ಸ್ಥಳ, ಪ್ರೇಕ್ಷಕರು ಹಾಗೂ ಸಮುದಾಯಗಳೊಂದಿಗೆ ಹೊಸ ರೀತಿಯ ತೊಡಗಿಸಿಕೊಳ್ಳುವ ವಿಧಾನಗಳನ್ನು ಪರಿಶೀಲಿಸಬಹುದು ಹಾಗೂ ಪ್ರಯೋಗಶೀಲತೆಯ ಮನೋಭಾವವನ್ನು ಮುನ್ನೆಲೆಗೆ ತರುತ್ತವೆ.

**ಕಲಾ ವೇದಿಕೆಗಳು (Arts Platforms)**

ಕಲಾವಿದರಾಗಿ, ನಾವು ಒಟ್ಟಾಗಿ ಸೇರಿ ಸಹಯೋಗದೊಂದಿಗೆ ಕೆಲಸ ಮಾಡುವ ಹಾಗೂ ಕಲಾ ಸೃಷ್ಟಿಯ ಮೂಲಕ ಸಾಮೂಹಿಕ ಕ್ರಿಯಾಶೀಲತೆಯನ್ನು ಉತ್ತೇಜಿಸುವ ಅಗತ್ಯವನ್ನು ಹೆಚ್ಚಾಗಿ ಅನುಭವಿಸುತ್ತೇವೆ. ವಿಭಿನ್ನ ಪ್ರದೇಶಗಳು, ಕಲಾ ಅಭ್ಯಾಸಗಳು ಮತ್ತು ತಲೆಮಾರುಗಳ ಕಲಾವಿದರು ಒಂದಾಗಿ ಸೇರುವಾಗ, ಪರಸ್ಪರ ಚರ್ಚೆ, ನವೀನತೆ ಮತ್ತು ಪರಿಕಲ್ಪನೆಗಳು ಹಾಗೂ ತಂತ್ರಗಳ ಕುರಿತು ಹೊಸ ಪ್ರಯೋಗಗಳನ್ನು ನಡೆಸಲು ಸಮಾನ ಮನಸ್ಕರ ಗುಂಪುಗಳು, ಜಾಲಗಳು (Networks) ಮತ್ತು ಸಹಭಾಗಿತ್ವದ ಬಳಗಗಳು (Cohorts) ರೂಪುಗೊಳ್ಳುತ್ತವೆ. ಜ್ಞಾನ ವಿನಿಮಯ, ಸಂವಾದ, ಚರ್ಚೆ, ಕಲಿಕೆ ಮತ್ತು ಸಾಮೂಹಿಕ ಬೆಳವಣಿಗೆಗೆ ಅವಕಾಶ ಕಲ್ಪಿಸುವ ಇಂತಹ ವೇದಿಕೆಗಳು, ಅನಿರೀಕ್ಷಿತ ಕಲಾತ್ಮಕ ಶಕ್ತಿಗಳ ಸಂಗಮಕ್ಕೆ ಮಹತ್ವದ ಪೋಷಕ ಕೇಂದ್ರಗಳಾಗಿ (Incubators) ಬೆಳೆಯುತ್ತವೆ.

ಇಂತಹ ಜಾಲಗಳು (Networks) ಪ್ರಗತಿಪರ ಕಲಾವಿದರಿಗೆ ಸಾಮಾಜಿಕ ಮತ್ತು ರಾಜಕೀಯ ಬೆಳವಣಿಗೆಗಳಿಗೆ ತೀವ್ರವಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯವನ್ನು ಒದಗಿಸುತ್ತವೆ; ಕಲಾ ಅಭ್ಯಾಸಗಳಿಗೆ ಸುಸ್ಥಿರ ಚೌಕಟ್ಟುಗಳನ್ನು ನಿರ್ಮಿಸಲು, ಸದೃಢ ಕಲಾ ಸಮುದಾಯಗಳನ್ನು ಬೆಳೆಸಲು ಹಾಗೂ ಇದುವರೆಗೆ ಕೇಳಿಸದ ಧ್ವನಿಗಳಿಗೆ ಅಗತ್ಯವಾದ ಆಲಿಸುವ ಅವಕಾಶಗಳನ್ನು ಸೃಷ್ಟಿಸಲು ನೆರವಾಗುತ್ತವೆ. ಸಂಪನ್ಮೂಲಗಳನ್ನು ಹಂಚಿಕೊಳ್ಳುವುದರೊಂದಿಗೆ, ಹಂಚಿಕೆಯ ಸ್ವಾಮ್ಯವನ್ನು ಉತ್ತೇಜಿಸುವ ಮೂಲಕ **Arts Platforms** ಸಮಾವೇಶಿತ್ವ, ಹೊಂದಿಕೊಳ್ಳುವಿಕೆ ಮತ್ತು ದೀರ್ಘಕಾಲೀನ ಪರಿಣಾಮಗಳಿಗೆ ಆದ್ಯತೆ ನೀಡುವ ಸೃಜನಾತ್ಮಕ ಪರಿಸರಗಳನ್ನು ಬೆಳೆಸುತ್ತವೆ. ಇದರಿಂದ ಕಲಾ ಅಭ್ಯಾಸಗಳು ಬದಲಾಗುತ್ತಿರುವ ಸಂದರ್ಭಗಳಿಗೆ ಸ್ಪಂದಿಸುವಂತಾಗುತ್ತವೆ. ಈ ಕಾರ್ಯಕ್ರಮವು ನವೀನತೆ, ಐಕ್ಯತೆ ಹಾಗೂ ಕಲೆಯಲ್ಲಿ ಸಾಮೂಹಿಕ ಕ್ರಿಯಾಶೀಲತೆಯ ಶಕ್ತಿಯನ್ನು ಗೌರವಿಸುತ್ತದೆ.

**ಆರ್ಟ್ಸ್ ಪ್ರಾಕ್ಟಿಸ್ (Arts Practice)** ಕಾರ್ಯಕ್ರಮದ ಅಡಿಯಲ್ಲಿ, ಕಾರ್ಯಾಗಾರಗಳು (Workshops), ಕಲಾವಿದರ ವಸತಿ ಕಾರ್ಯಕ್ರಮಗಳು (Residencies), ಕಲಾವಿದರ ಸಭೆಗಳು (Artists' Gatherings) ಮೊದಲಾದ ರೂಪಗಳಲ್ಲಿ ನಡೆಯಬಹುದಾದ **ಕಲಾ ವೇದಿಕೆಗಳ (Arts Platforms)** ಪ್ರಸ್ತಾವನೆಗಳನ್ನು

ನಾವು ಆಹ್ವಾನಿಸುತ್ತೇವೆ. ಇವು ಜಾಲಗಳು ಹಾಗೂ ಸ್ಥಳಗಳನ್ನು (ಭೌತಿಕ, ಆನ್‌ಲೈನ್ ಅಥವಾ ಇವೆರಡರ ಸಂಯೋಜಿತ ರೂಪದಲ್ಲಿ) ನಿರ್ಮಿಸಿ, ಚೈತನ್ಯಗೊಳಿಸುವ ಉದ್ದೇಶ ಹೊಂದಿರಬೇಕು. ಈ ಉಪಕ್ರಮಗಳು ಒಂದೇ ಅಥವಾ ವಿಭಿನ್ನ ಕಲಾ ಅಭ್ಯಾಸಗಳಲ್ಲಿ ತೊಡಗಿರುವ ಕಲಾವಿದರನ್ನು ಒಂದು ಸಾಮಾನ್ಯ ವೇದಿಕೆಯಲ್ಲಿ ಒಂದಾಗಿಸಿ, ಪರಸ್ಪರ ವಿನಿಮಯವನ್ನು ಉತ್ತೇಜಿಸುವುದು, ಸಹಯೋಗವನ್ನು ಬೆಳೆಸುವುದು, ಸೃಜನಶೀಲತೆಯನ್ನು ಪ್ರೇರೇಪಿಸುವುದು ಹಾಗೂ ಅವರ ಕಲಾ ಅಭ್ಯಾಸಗಳ ಸುಸ್ಥಿರತೆಯನ್ನು ಬೆಂಬಲಿಸುವ ಉದ್ದೇಶ ಹೊಂದಿರಬೇಕು.

**ಯೋಜನೆಯ ಅವಧಿ**

ಗರಿಷ್ಠ 12 ತಿಂಗಳುಗಳವರೆಗೆ

**ಬಜೆಟ್**

ಗರಿಷ್ಠ ರೂ. 3,00,000/- ವರೆಗೆ

**ಯಾರು ಅರ್ಜಿ ಸಲ್ಲಿಸಬಹುದು?**

ವಿವಿಧ ಕಲಾ ವಿಭಾಗಗಳೊಳಗೆ ಹಾಗೂ ವಿವಿಧ ಕಲಾ ವಿಭಾಗಗಳ ನಡುವೆ ಕಾರ್ಯನಿರ್ವಹಿಸುತ್ತಿರುವ ಕಲಾ ಅಭ್ಯಾಸಕಾರರಿಂದ (Practitioners) ನಾವು ಪ್ರಸ್ತಾವನೆಗಳನ್ನು ಆಹ್ವಾನಿಸುತ್ತೇವೆ. ಇವುಗಳಲ್ಲಿ ಈ ಕೆಳಗಿನವರು ಸೇರಿರಬಹುದು:

- **ಪ್ರದರ್ಶನ ಕಲೆಗಳ ಕಲಾವಿದರು** – ಸಂಗೀತ, ಧ್ವನಿ, ಪಠ್ಯ, ನೃತ್ಯ, ಚಲನೆ, ರಂಗಭೂಮಿ, ಗೊಂಬೆಯಾಟ, ಕಥೆ ಹೇಳುವಿಕೆ, ಮ್ಯಾಜಿಕ್, ಸರ್ಕಸ್ ಹಾಗೂ ಇತರೆ ಪ್ರದರ್ಶನ ಕಲೆಗಳಲ್ಲಿ ಕಾರ್ಯನಿರ್ವಹಿಸುವವರು.

- **ದೃಶ್ಯಕಲೆಗಳ ಕಲಾವಿದರು** – ಸಾಕ್ಷ್ಯಚಿತ್ರ ಮತ್ತು ಕಾಲ್ಪನಿಕ ಚಲನಚಿತ್ರಗಳು, ಅನಿಮೇಷನ್, ಛಾಯಾಗ್ರಹಣ, ಸ್ಥಾಪನಾ ಕಲೆ, ನೂತನ ಮಾಧ್ಯಮ, ಸೃಜನಾತ್ಮಕ ಕೋಡಿಂಗ್, ಕೃತಕ ಬುದ್ಧಿಮತ್ತೆ, ರೋಬೋಟಿಕ್ಸ್, ಸಂವಾದಾತ್ಮಕ ಕಲೆಗಳು, ಗೇಮಿಂಗ್ / ಪರಿಕಲ್ಪನಾ ಕಲೆ, ಚಿತ್ರಕಲೆ, ಶಿಲ್ಪಕಲೆ, ಮುದ್ರಣಕಲೆ, ಕಾಮಿಕ್ ಪುಸ್ತಕಗಳು, ಗ್ರಾಫಿಕ್ ಕಥನ, ಕಲಾವಿದರ ಪುಸ್ತಕಗಳು ಹಾಗೂ ಇತರೆ ಎಲ್ಲಾ ದೃಶ್ಯಕಲೆಗಳ ಮಾದರಿಗಳಲ್ಲಿ ಕಾರ್ಯನಿರ್ವಹಿಸುವವರು.

- **ಕ್ಯುರೇಟರ್‌ಗಳು** – ವಿಶೇಷವಾಗಿ ಗ್ಯಾಲರಿ ವ್ಯಾಪ್ತಿಯ ಹೊರಗೆ ಕಾರ್ಯನಿರ್ವಹಿಸುವವರು.

- **ಸಾಹಿತ್ಯಕಲೆಯ ಅಭ್ಯಾಸಕಾರರು** – ಕವಿಗಳು, ಕಾದಂಬರಿಕಾರರು, ಸಣ್ಣಕಥೆಗಾರರು, ನಾಟಕಕಾರರು, ಚಲನಚಿತ್ರ ಕಥೆಗಾರರು, ಕಾಮಿಕ್ಸ್ ಬರಹಗಾರರು, ಗೇಮ್ ಬರಹಗಾರರು ಹಾಗೂ ಸೃಜನಾತ್ಮಕ ಕಾಲ್ಪನಿಕವಲ್ಲದ ಬರಹಗಾರರು.

- **ಅಂತರಶಿಸ್ತಿನ ಕಾರ್ಯಗಳಲ್ಲಿ ತೊಡಗಿರುವ ಕಲಾ ಅಭ್ಯಾಸಕಾರರು.**

**ಸಲ್ಲಿಕೆ ಮಾರ್ಗಸೂಚಿಗಳು**

ನಿಮ್ಮ ಪ್ರಸ್ತಾವನೆಯನ್ನು ಇಂಗ್ಲಿಷ್ ಸೇರಿದಂತೆ **ಯಾವುದೇ ಭಾರತೀಯ ಭಾಷೆಯಲ್ಲಿ** ಬರೆಯಬಹುದು. ಇಂಗ್ಲಿಷ್ ಹೊರತುಪಡಿಸಿ ಇತರ ಭಾರತೀಯ ಭಾಷೆಗಳಲ್ಲಿ ಸಲ್ಲಿಸುವ ಯೋಜನೆಗಳನ್ನು **ಐಎಫ್ಎ ಪ್ರೋತ್ಸಾಹಿಸುತ್ತದೆ.**

ಕೆಳಗಿನ ಮಾಹಿತಿಗಳೊಂದಿಗೆ ನಿಮ್ಮ ಪ್ರಸ್ತಾವನೆಯನ್ನು ನಮಗೆ ಕಳುಹಿಸಿ:

● ಕಲಾ ಅಭ್ಯಾಸಕಾರರಾಗಿ ನಿಮ್ಮ ಪ್ರಸ್ತುತ ಕಲಾ ಅಭ್ಯಾಸ, ನಿಮ್ಮ ಆಸಕ್ತಿಗಳು ಹಾಗೂ ನಿಮ್ಮ ಕಾರ್ಯವನ್ನು ಮುನ್ನಡೆಸುವ ಪ್ರಮುಖ ಚಿಂತನೆಗಳು

● **Arts Platform** ಅನ್ನು ರೂಪಿಸಿ ಬೆಳೆಸಲು ನಿಮಗೆ ಇರುವ ಪ್ರೇರಣೆ.

● ನೀವು ರೂಪಿಸಲು ಉದ್ದೇಶಿಸಿರುವ **Arts Platform** ಕುರಿತು ಸಮಗ್ರ ವಿವರಗಳು—ಅದರ ಉದ್ದೇಶ, ಅದರಲ್ಲಿ ಭಾಗವಹಿಸುವ ಪಾಲುದಾರರು ಮತ್ತು ಸಹಯೋಗಿಗಳು , ಹಾಗೆಯೇ ನೀವು ಅದನ್ನು ಆಯೋಜಿಸಲು ಅಥವಾ ಸಕ್ರಿಯಗೊಳಿಸಲು ಉದ್ದೇಶಿಸಿರುವ ಜಾಲ, ಸ್ಥಳ , ಪ್ರದೇಶ ಅಥವಾ ನಿರ್ದಿಷ್ಟ ಸ್ಥಳ .

● ಚಟುವಟಿಕೆಗಳ ವಿವರವಾದ ಕಾಲಪಟ್ಟಿ .

● ವೆಚ್ಚಗಳ ಸಮಗ್ರ ವಿವರಗಳನ್ನು ಒಳಗೊಂಡ ಬಜೆಟ್ .

● ಈ ಅರ್ಜಿಗೆ ಸಂಬಂಧಿಸಿದ ನಿಮ್ಮ ಹಿಂದಿನ ಕೆಲಸಗಳ ಉದಾಹರಣೆಗಳು.

● ನಿಮ್ಮ ಪ್ರಸ್ತುತ ಅಂಚೆ ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಇ-ಮೇಲ್ ವಿಳಾಸವನ್ನು ಒಳಗೊಂಡ ಕಿರುಪರಿಚಯ (CV).

● ನಿಮ್ಮ ಅಂತಿಮ ಅರ್ಜಿಯನ್ನು **ಒಂದೇ ಇ-ಮೇಲ್‌ನಲ್ಲಿ John Xaviers, Programme Officer, Arts Practice** ಅವರಿಗೆ **john@indiaಐಎಫ್ಎ.org** ವಿಳಾಸಕ್ಕೆ ಕಳುಹಿಸಿ.

**ಇ-ಮೇಲ್ ವಿಷಯ :Project Proposal for Arts Platforms (Arts Practice)**

● ನಿಮ್ಮ ಪ್ರಸ್ತಾವನೆಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು ಅಥವಾ ಸ್ಪಷ್ಟೀಕರಣಗಳಿಗಾಗಿ **john@indiaಐಎಫ್ಎ.org** ಗೆ ಇ-ಮೇಲ್ ಬರೆಯಬಹುದು.

**ಅರ್ಹತೆ**

● **ಭಾರತೀಯ ನಾಗರಿಕರು ಮಾತ್ರ** ಅರ್ಜಿ ಸಲ್ಲಿಸಲು ಅರ್ಹರು. ಇದು **PIO (Persons of Indian Origin – ಭಾರತೀಯ ಮೂಲದ ವ್ಯಕ್ತಿಗಳು)** ಹಾಗೂ **OCI (Overseas Citizen of India – ಭಾರತದ ಸಾಗರೋತ್ತರ ನಾಗರಿಕ) ಕಾರ್ಡ್ ಹೊಂದಿರುವವರನ್ನು** ಒಳಗೊಂಡಿರುವುದಿಲ್ಲ.

● ಅರ್ಜಿದಾರರು **PAN ಕಾರ್ಡ್** ಹೊಂದಿರಬೇಕು. ಜೊತೆಗೆ ಗುರುತು ಮತ್ತು ಭಾರತೀಯ ಪೌರತ್ವದ ಪುರಾವೆಯಾಗಿ ಕೆಳಗಿನ ಯಾವುದಾದರೂ **ಒಂದು ದಾಖಲೆ** ಕಡ್ಡಾಯವಾಗಿರಬೇಕು:

● ಭಾರತೀಯ ಪಾಸ್‌ಪೋರ್ಟ್ ಅಥವಾ ಆಧಾರ್ ಕಾರ್ಡ್ ಅಥವಾ ಭಾರತದಲ್ಲಿ ನೀಡಲಾದ ಮತದಾರರ ಗುರುತಿನ ಚೀಟಿ .

● **ವ್ಯಕ್ತಿಗಳು ಮಾತ್ರ** ಅರ್ಜಿ ಸಲ್ಲಿಸಬಹುದು. ಯಾವುದೇ ರೀತಿಯ ಸಂಸ್ಥೆಗಳು ಅರ್ಜಿ ಸಲ್ಲಿಸುವ ಹಾಗಿಲ್ಲ.

● ಯೋಜನೆಯಲ್ಲಿ ಸಹಯೋಗಿಗಳು ಇದ್ದಲ್ಲಿ, ಅವರೂ ಸಹ **ಭಾರತೀಯ ನಾಗರಿಕರಾಗಿರಬೇಕು.**

● ಈ ಹಿಂದೆ **ಐಎಫ್‌ಎ** ಸಂಸ್ಥೆಯೊಂದಿಗೆ ಹಣಕಾಸು ಸಂಬಂಧಿತ ಬಾಕಿ ಅಥವಾ ಅನಿಯಮಿತತೆ ಹೊಂದಿರುವ ವ್ಯಕ್ತಿಗಳು ಅರ್ಜಿ ಸಲ್ಲಿಸಲು ಅರ್ಹರಲ್ಲ.

● ಈ ಹಿಂದೆ **ಐಎಫ್‌ಎ** ಅನುದಾನದಡಿ ಒಪ್ಪಿಕೊಂಡಿದ್ದ ಕಾರ್ಯಫಲಿತಾಂಶಗಳನ್ನು **ಐಎಫ್‌ಎ**ಗೆ ಸಲ್ಲಿಸಲು ವಿಫಲರಾದವರು ಅರ್ಜಿ ಸಲ್ಲಿಸಲು ಅರ್ಹರಲ್ಲ.

● ಯಾವುದೇ ಕಾರಣಕ್ಕಾಗಿ ಭವಿಷ್ಯದಲ್ಲಿ **ಐಎಫ್‌ಎ** ಯೋಜನೆಗಳಿಗೆ ಅರ್ಜಿ ಸಲ್ಲಿಸಬಾರದೆಂದು **ಐಎಫ್‌ಎ**ಯಿಂದ ಅಧಿಕೃತ ಪತ್ರ ಪಡೆದಿರುವವರು ಅರ್ಜಿ ಸಲ್ಲಿಸಲು ಅರ್ಹರಲ್ಲ.

● ಪ್ರಸ್ತುತ **ಐಎಫ್‌ಎ** ಅನುಷ್ಠಾನಗೊಳಿಸುತ್ತಿರುವ ಯಾವುದೇ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರು ಅರ್ಜಿ ಸಲ್ಲಿಸಲು ಅರ್ಹರಲ್ಲ.

● ಒಂದಕ್ಕಿಂತ ಹೆಚ್ಚು ವ್ಯಕ್ತಿಗಳು **ಜಂಟಿ ಬ್ಯಾಂಕ್ ಖಾತೆ** ಹೊಂದಿದ್ದರೆ ಅವರು ಒಟ್ಟಾಗಿ ಅರ್ಜಿ ಸಲ್ಲಿಸಬಹುದು. ಜಂಟಿ ಖಾತೆ ಇಲ್ಲದಿದ್ದರೆ, ಅವರಲ್ಲಿ ಒಬ್ಬರು ಮಾತ್ರ ಮುಖ್ಯ ಅರ್ಜಿದಾರರಾಗಿ ಅರ್ಜಿ ಸಲ್ಲಿಸಬೇಕು; ಉಳಿದವರು ಸಹಯೋಗಿಗಳಾಗಿ ಸೇರಬೇಕು.

**ಆಯ್ಕೆ ಪ್ರಕ್ರಿಯೆ**

ಆಯ್ಕೆಗಾಗಿ ಸಂಕ್ಷಿಪ್ತ ಪಟ್ಟಿಗೆ ಸೇರಿದ ಪ್ರಸ್ತಾವನೆಗಳನ್ನು **ಬಾಹ್ಯ ತಜ್ಞರ ಸಮಿತಿ** ಮೌಲ್ಯಮಾಪನ ಮಾಡುತ್ತದೆ.

ಸಂಕ್ಷಿಪ್ತ ಪಟ್ಟಿಗೆ ಆಯ್ಕೆಯಾದ ಅರ್ಜಿದಾರರು ತಮ್ಮ ಯೋಜನೆಯ ಪರಿಕಲ್ಪನೆಗಳನ್ನು ಸಮಿತಿಯ ಮುಂದೆ ಪ್ರಸ್ತುತಪಡಿಸಬೇಕಾಗುತ್ತದೆ.

**ಆಯ್ಕೆಯಾಗುವ ಎಲ್ಲಾ ಯೋಜನೆಗಳನ್ನು ಐಎಫ್‌ಎ ವತಿಯಿಂದ ಅನುಷ್ಠಾನಗೊಳಿಸಲಾಗುತ್ತದೆ.**

**ಪ್ರಮುಖ ದಿನಾಂಕಗಳು**

● ನಿಮ್ಮ ಪ್ರಶ್ನೆಗಳು ಹಾಗೂ ಕರಡು ಪರಿಕಲ್ಪನೆಗಳನ್ನು **ಲಿಖಿತ, ಧ್ವನಿ ಅಥವಾ ವೀಡಿಯೊ** ರೂಪದಲ್ಲಿ **2026ರ ಆಗಸ್ಟ್ 21** ರವರೆಗೆ **ಐಎಫ್‌ಎ ಸಿಬ್ಬಂದಿಯಿಂದ ಪ್ರತಿಕ್ರಿಯೆ ಪಡೆಯಲು** ಕಳುಹಿಸಬಹುದು.

● **ಅಂತಿಮ ಪ್ರಸ್ತಾವನೆ ಸಲ್ಲಿಸುವ ಕೊನೆಯ ದಿನಾಂಕ: 2026ರ ಆಗಸ್ಟ್ 31**

- ಆಯ್ಕೆಯಾದ ಯೋಜನೆಗಳ ಘೋಷಣೆ: ನವೆಂಬರ್ 2026

**ಪ್ರಮುಖ ಸೂಚನೆ**

**ಮಕ್ಕಳನ್ನು ಒಳಗೊಂಡಂತೆ ಪ್ರತಿಯೊಬ್ಬರಿಗೂ ಬೆಂಬಲ, ಗೌರವ ಮತ್ತು ರಕ್ಷಣೆಯನ್ನು ಒದಗಿಸುವ ಸುರಕ್ಷಿತ ವಾತಾವರಣವನ್ನು ನಿರ್ಮಿಸಲು ಐಎಫ್ಎ ಬದ್ಧವಾಗಿದೆ. ಅರ್ಜಿದಾರರು ಈ ಬದ್ಧತೆಯೊಂದಿಗೆ ಹೊಂದಾಣಿಕೆಯಾಗಿರಬೇಕು ಮತ್ತು ಯೋಜನೆಯ ಎಲ್ಲಾ ಹಂತಗಳಲ್ಲಿಯೂ ಅದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.**